ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
https://raichuruniversity.ac.in ಆಡಳಿತ ವಿಭಾಗ registrarrur@gmail.com

ಕ್ರ.ಸಂ. ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/2022-23/ ದಿನಾಂಕ: 24/09/2022

ಗೆ
ಮಾನ್ಯ ಸಿಂಡಿಕೇಟ ಸದಸ್ಯರುಗಳು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

ಮಾನ್ಯರೇ,

ವಿಷಯ: ದಿನಾಂಕ: 23.09.2022ರಂದು ಮಧ್ಯಾಹ್ನ 12.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡಾವಳಿಗಳು.

*****

ದಿನಾಂಕ: 23.09.2022 ರಂದು ಮಧ್ಯಾಹ್ನ 12.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡಾವಳಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ
24/9/22
ಪ್ರೊ. ವಿಶ್ವನಾಥ ಎಂ.,
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಅಡಕ: ನಡಾವಳಿಗಳು.

ಪ್ರತಿಗಳು :

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
3. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
4. ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
5. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
6. ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
7. ಉಪ-ಕುಲಸಚಿವರು, ಆಡಳಿತ/ವಿದ್ಯಾಮಂಡಲ/ಪರೀಕ್ಷಾ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
8. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
9. ಕಛೇರಿ ಕಡತಕ್ಕೆ.

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ

ಆಡಳಿತ ವಿಭಾಗ

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ 23.09.2022 ರಂದು ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 1. | ಶ್ರೀ. ಶಿವಬಸಪ್ಪ, ಮಾಲಿಪಾಟೀಲ | ಸಿಂಡಿಕೇಟ್ ಸದಸ್ಯರು |
| 2. | ಶ್ರೀ. ನಾಗೇಂದ್ರ ಪ್ರಸಾದ ಎ.ಎಂ., | ಸಿಂಡಿಕೇಟ್ ಸದಸ್ಯರು |
| 3. | ಶ್ರೀ. ಜಗದೀಶ್ ಹೆಚ್.ಬಿನ್ ಅಮರಣ್ಣ, | ಸಿಂಡಿಕೇಟ್ ಸದಸ್ಯರು |
| 4. | ಶ್ರೀ. ಮೋಹನ್ ಕುಮಟಕರ್ | ಸಿಂಡಿಕೇಟ್ ಸದಸ್ಯರು |
| 5. | ಶ್ರೀಮತಿ ಕಾವೇರಿ ಕೇದಾರನಾಥ್ | ಸಿಂಡಿಕೇಟ್ ಸದಸ್ಯರು |
| 6. | ಶ್ರೀ ಶಂಕರರೆಡ್ಡಿ ಜಿ., | ಸಿಂಡಿಕೇಟ್ ಸದಸ್ಯರು |
| 7. | ಪ್ರೊ. ಭಜಂತ್ರಿ ವೈ.ಎಂ., | ಸಿಂಡಿಕೇಟ್ ಸದಸ್ಯರು |
| 8. | ಪ್ರೊ. ಎಂ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) | ಸಿಂಡಿಕೇಟ್ ಸದಸ್ಯರು |
| 9. | ಪ್ರೊ. ಪಾರ್ವತಿ ಸಿ.ಎಸ್., (ಡೀನರು) | ವಿಶೇಷ ಆಹ್ವಾನಿತರು |
| 10. | ಪ್ರೊ. ವಿಶ್ವನಾಥ ಎಂ.ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ / ಐಟಂ ನಂ | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 01 | ದಿನಾಂಕ: 23.08.2022 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳ ಅನುಮೋದನೆ ಬಗ್ಗೆ | ದಿನಾಂಕ: 23.08.2022 ರಂದು ನಡೆದ ವಿಶೇಷ ಸಿಂಡಿಕೇಟ್ ನಡವಳಿಗಳ ಅನುಮೋದಿಸಲಾಯಿತು |
| 02 | ಸರಕಾರದಿಂದ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ (KKRDB) ಮುಖಾಂತರ ವಿಶ್ವವಿದ್ಯಾಲಯಕ್ಕೆ ಮಂಜೂರಾದ ಅನುದಾನವನ್ನು ವಿಶ್ವವಿದ್ಯಾಲಯದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವ ಕುರಿತು ಚರ್ಚೆ | ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ (KKRDB) ಮುಖಾಂತರ ಸರ್ಕಾರದ ವಿವೇಚನಾ ಖೋಟಾದ ಅಡಿಯಲ್ಲಿ ಮಂಜೂರಾದ ರೂ. 20,08,60,000/-(ಇಪ್ಪತ್ತು ಕೋಟಿ ಎಂಟು ಲಕ್ಷದ ಅರವತ್ತು ಸಾವಿರಗಳು ಮಾತ್ರ) ವಿಶ್ವವಿದ್ಯಾಲಯದ ವಿವಿಧ ಕಾರ್ಯಗಳಿಗೆ ವಿನಿಯೋಗಿಸಲು ತಾತ್ವಿಕವಾಗಿ ಒಪ್ಪಲಾಯಿತು. ಮುಂದುವರೆದು ವಿದ್ಯಾರ್ಥಿ ವಸತಿನಿಲಯ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ, ಸಿಂಡಿಕೇಟ್ ಸದಸ್ಯರುಗಳಾದ ಶ್ರೀ. ಶಂಕರರೆಡ್ಡಿಯವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯ ವರದಿಯ ಆಧಾರದ ಮೇಲೆ ಅವಶ್ಯವಿರುವ ಎಲ್ಲಾ ಸಾಮಗ್ರಿಗಳನ್ನು ಖರೀದಿಸುವುದು, ರಿಪೇರಿ ಮಾಡಿಸುವುದು, ಉನ್ನತೀಕರಿಸಲು ಹಾಗೂ ತುರ್ತು ಕೆಲಸಗಳನ್ನು ಪೂರೈಸಲು ಒಪ್ಪಿಗೆ ನೀಡಿ |

| | | |
|---|---|---|
| | | ಈಗಾಗಲೇ ವಿಸ್ತೃತ ಕ್ರಿಯಾ ಯೋಜನೆಯ ರಚನೆಯ ಸಂಬಂಧ ಒಂದು ಸಿಂಡಿಕೇಟ್ ಉಪ ಸಮಿತಿಯನ್ನು ರಚಿಸಿ ಅದರ ಮೂಲಕ ಸಿವಿಲ್/ತಾಂತ್ರಿಕ ಕಾರ್ಯಗಳನ್ನು ಪೂರೈಸಲು ಒಪ್ಪಿಗೆ ನೀಡಲಾಯಿತು. ಮುಂದುವರೆದು ಕುಲಪತಿಗಳ ವಿವೇಚನೆಗೆ ಒಳಪಟ್ಟಂತೆ ಒಂದು ತಾಂತ್ರಿಕ ಸಮಿತಿಯಾದ CENTRE OF EXCELLENCE (Centre of open innovative and Production for future industry) (Advanced Artificial Intelligence) ಅನ್ನು ರಚಿಸಿ ಅದರ ಮೂಲಕ ಅನುಷ್ಠಾನಕ್ಕೆ ತರಲು ಒಪ್ಪಿಗೆ ನೀಡಿ ಅನುಮೋದನೆ ನೀಡಲಾಯಿತು. |
| 03 | 2021-22ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದಿರುವ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಜಮೆಯಾದ ವಿಮಾ ಶುಲ್ಕವನ್ನು ಬಳಸಿಕೊಳ್ಳುವದರ ಬಗ್ಗೆ ಚರ್ಚೆ | 2021-22ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕೊತ್ತರ ಪ್ರವೇಶ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಜಮೆಯಾದ ವಿಮಾ ಶುಲ್ಕವನ್ನು ಈಗಾಗಲೇ ಹಣಕಾಸು ಸಮಿತಿಯಲ್ಲಿ ನಿರ್ಧರಿಸಿ ಒಪ್ಪಿದಂತೆ ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಯಲ್ಲಿ ಜಮಾ ಇರಿಸಿ ಸಿಂಡಿಕೇಟ ಉಪ ಸಮಿತಿ ಮುಖಾಂತರ ನಿರ್ಧರಿಸಿದ ಮೊತ್ತವನ್ನು ಪ್ರಸಕ್ತ ವರ್ಷದಲ್ಲಿ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಬಳಸಲು ಒಪ್ಪಿ ಅನುಮೋದಿಸಲಾಯಿತು ಹಾಗೂ ಈ ಖಾತೆಯನ್ನು ವಿದ್ಯಾರ್ಥಿ ಕಲ್ಯಾಣ ನಿಧಿ ಎಂದು ಮನರ ನಾಮಕರಣ ಮಾಡಲು ತೀರ್ಮಾನಿಸಲಾಯಿತು. |
| 04 | UUCMS ಅಡಿಯಲ್ಲಿ ಬರುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ 1ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪರೀಕ್ಷಾ ನಂತರದ ಕಾರ್ಯಗಳನ್ನು ನಿರ್ವಹಿಸಿ ಫಲಿತಾಂಶ ಬಿಡುಗಡೆಗೊಳಿಸುವ ಕಾರ್ಯಗಳನ್ನು ನಿರ್ವಹಿಸುವುದರ ಬಗ್ಗೆ ಚರ್ಚೆ | ರಾಯಚೂರು ವಿಶ್ವವಿದ್ಯಾಲಯದ 2021-22 ನೇ ಸಾಲಿನ ಸ್ನಾತಕ (U.G) B.A/B.Sc/B.Com/B.B.A/B.CA ಈ ಎಲ್ಲಾ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳು ಈಗಾಗಲೇ ಮುಗಿದಿದ್ದು ಈ ಎಲ್ಲಾ ಪರೀಕ್ಷೆಗಳನ್ನು UUCMS ತಂತ್ರಾಂಶದ ಮೂಲಕ ನಡೆಸಲಾಗಿದೆ, ಈ ಪರೀಕ್ಷೆಯಿಂದ ಸುಮಾರು 1,38,000 ಉತ್ತರ ಪತ್ರಿಕೆಗಳು ವಿಶ್ವವಿದ್ಯಾಲಯದಲ್ಲಿವೆ, ಪರೀಕ್ಷಾ ನಂತರದ ಮೌಲ್ಯಮಾಪನ ಕಾರ್ಯಗಳಿಗೆ ಸಂಬಂಧಿಸಿದಂತೆ, ಈ ಎಲ್ಲಾ ಕಾರ್ಯಗಳನ್ನು UUCMS ತಂತ್ರಾಂಶದಲ್ಲಿ ಮಾಡಬೇಕಾಗಿರುವುದರಿಂದ ಕುಲಸಚಿವರು (ಮೌಲ್ಯಮಾಪನ) ಅವರು ವಿವರಿಸಿದಂತೆ ಈ ಕೆಳಗಿನ ಪರೀಕ್ಷಾ ನಂತರದ ಕಾರ್ಯಗಳನ್ನು UUCMS ನ ತಿಳಿಸಿದಂತೆ ಪಾಲನೆ ಮಾಡಿ ಫಲಿತಾಂಶ ನೀಡಬೇಕಾಗಿದೆ ಈ ಪ್ರಕ್ರಿಯೆಯ ಹಂತಗಳು ಈ ಕೆಳಗಿನಂತಿವೆ ;<br>1. ಉತ್ತರ ಪತ್ರಿಕೆಗಳ ಬಂಡಲ್‌ನ್ನು ಒಡೆದು 'A' Form ಪರಿಶೀಲಿಸಿ ತಾಳೆಮಾಡುವುದು<br>2. ಉತ್ತರ ಪತ್ರಿಕೆಗಳ ಕೋಡಿಂಗ್‌ನ್ನು ಮೊದಲು UUCMS ತಂತ್ರಾಂಶದಲ್ಲಿ ಅಳವಡಿಸುವುದು<br>3. 20 ಉತ್ತರ ಪತ್ರಿಕೆಗಳಂತೆ ಬಂಡಲ್‌ಗಳನ್ನು ತಯಾರಿಸುವುದು<br>4. ಕೋಡಿಂಗ್ ಮಾಡುವ ಸ್ಟಿಕ್ಕರ್‌ಗಳನ್ನು ಉತ್ತರ ಪತ್ರಿಕೆ ಕೋಡ್‌ಶೀಟ್‌ಗೆ ಹಚ್ಚುವುದು<br>5. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲು ಅನುಕೂಲವಾಗುವಂತೆ ಉತ್ತರ ಪತ್ರಿಕೆಗಳನ್ನು ವಿಂಗಡಿಸಿ ವಿಷಯವಾರು ಪ್ಯಾಕ್‌ಮಾಡಿ ಮೌಲ್ಯಮಾಪಕರಿಗೆ ಹಂಚುವುದು<br>6. ಮೌಲ್ಯಮಾಪಕರು ಮೌಲ್ಯಮಾಪನ ಮಾಡಿದ ಮಾರ್ಕ್ಸ್‌ನ್ನು UUCMS ತಂತ್ರಾಂಶದಲ್ಲಿ ನಮೂದಿಸುವುದು<br>7. ನಮೂದಿಸಿದ ಮಾರ್ಕ್ಸ್ ಶೀಟನ ಪ್ರಿಂಟ್‌ತೆಗೆದು |

| | | |
|---|---|---|
| | | ಮೌಲ್ಯಮಾಪಕರ ಮೂಲಕ ಕ್ರಾಸ್ ಚೆಕ್ ಮಾಡಿಸಿ ಮೌಲ್ಯಮಾಪಕರ ಸಹಿ ಪಡೆಯುವುದು.<br>8. ಈ ಕಾರ್ಯದ ನಂತರ UUCMS ಮೂಲಕ ಡಿ ಕೋಡಿಂಗ್ ಮಾಡಿ ಫಲಿತಾಂಶವನ್ನು ನೀಡುವುಕ್ಕೆ ನೆರವಾಗುವುದು.<br>ಈ ಮೇಲೆ ತಿಳಿಸಿದ ಪರೀಕ್ಷಾ ನಂತರದ ಎಲ್ಲಾ ಕಾರ್ಯಗಳನ್ನು ಮಾಡಲು ಬೇಕಾಗಿರುವ ಅನುಭವಿ ತಾಂತ್ರಿಕ ಸಿಬ್ಬಂದಿಗಳು ರಾಯಚೂರು ವಿಶ್ವವಿದ್ಯಾಲಯದಲ್ಲಿ ಇಲ್ಲದೇ ಇರುವುದರಿಂದ 6 ಜನ ಅನುಭವಿ ತಾಂತ್ರಿಕ ಸಿಬ್ಬಂದಿಗಳನ್ನು (ಪರೀಕ್ಷಾ ಕಾರ್ಯದ ಕಾಲಕ್ಕೆ ಮಾತ್ರ) ತೆಗೆದುಕೊಂಡು ಪ್ರತಿ ಉತ್ತರ ಪತ್ರಿಕೆಗೆ ರೂ. 6/- ಗಳಂತೆ ದರ ನಿಗದಿಪಡಿಸಿ ಹಾಗೂ ಆದಷ್ಟು ಬೇಗ ಫಲಿತಾಂಶವನ್ನು ಬಿಡುಗಡೆಗೊಳಿಸಲು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಅನುಮೋದಿಸಲಾಯಿತು. ಮುಂದುವರೆದು ಈ ಪರೀಕ್ಷಾ ನಂತರದ ಕಾರ್ಯಗಳನ್ನು ನಿರ್ವಹಿಸಲು ತಾಂತ್ರಿಕೇತರ (ಲೇಬರ್) ಸಿಬ್ಬಂದಿಗಳನ್ನು (ಪರಿಕ್ಷಾ ಕಾರ್ಯದ ಕಾಲಕ್ಕೆ ಮಾತ್ರ) ದಿನಗೂಲಿ ಆಧಾರದ ಮೇಲೆ ತೆಗೆದುಕೊಳ್ಳಲು ಆಡಳಿತಾತ್ಮಕ ಒಪ್ಪಿಗೆಯೊಂದಿಗೆ ಪರೀಕ್ಷಾ ಕಾರ್ಯ ನಡೆಸಲು ಅನುಮೋದಿಸಲಾಯಿತು |
| 05 | ಹೊಸ ಶಿಕ್ಷಣ ನೀತಿ (NEP-2020) ಆಂತರಿಕ ಪರೀಕ್ಷೆಯ ಡಿಜಿಟಲೈಜೆಶನ್ ಮಾಡುವುದರ ಬಗ್ಗೆ ಚರ್ಚೆ | ಹೊಸ ಶಿಕ್ಷಣ ನೀತಿ (NEP-2020) ಅನುಸಾರ ಆಂತರಿಕ ಪರೀಕ್ಷೆಯ ಡಿಜಿಟಲೈಜೆಶನ್ ಮಾಡಲು ತಾತ್ಕಾಲಿಕವಾಗಿ ಒಪ್ಪಿಗೆ ನೀಡಿ ಪ್ರಯೋಗಾತ್ಮಕವಾಗಿ ಬಿ.ಎಡ್/ಬಿ.ಪಿ.ಎಡ್/ಪಿಜಿ ವಿಭಾಗಗಳಲ್ಲಿ ಈ ಕಾರ್ಯವನ್ನು ಕೈಗೆ ತೆಗೆದುಕೊಳ್ಳಲು ಒಪ್ಪಿಗೆ ಸೂಚಿಸಿ ಅನುಮೋದಿಸಲಾಯಿತು. |
| 06 | 2022-23ನೇ ಸಾಲಿನ ಎರಡನೇ ಸೆಮಿಸ್ಟರ್‌ನಲ್ಲಿ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಲ್ಲಿ ಕೆಲವು ವಿಭಾಗಗಳಲ್ಲಿ ಕರ್ತವ್ಯಕ್ಕೆ ಹಾಜರಾಗದೇ ಇರುವುದರಿಂದ ಹೆಚ್ಚುವರಿಯಾಗಿ ಉಳಿದಿರುವ ಕಾರ್ಯಭಾರಕ್ಕೆ ಅನುಗುಣವಾಗಿ ಈಗಾಗಲೇ ಆಯಾ ವಿಭಾಗಗಳಿಗೆ ಅನುಗುಣವಾಗಿ ಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಮೆರಿಟ್-ಕಂ-ರೋಸ್ಟರ್ ಪ್ರಕಾರ ನೇಮಕಾತಿ ಮಾಡಿ ಪರಿಷ್ಕೃತ ಆದೇಶವನ್ನು ಹೊರಡಿಸುವ ಬಗ್ಗೆ ಚರ್ಚೆ | 2022-23ನೇ ಸಾಲಿನ ಎರಡನೇ ಸೆಮಿಸ್ಟರ್‌ನಲ್ಲಿ ನೇಮಕಗೊಂಡಿರುವ ಅತಿಥಿ ಉಪನ್ಯಾಸಕರುಗಳಲ್ಲಿ ಕೆಲವು ವಿಭಾಗಗಳಲ್ಲಿ ಕರ್ತವ್ಯಕ್ಕೆ ಹಾಜರಾಗದೇ ಇರುವುದರಿಂದ ಹೆಚ್ಚುವರಿಯಾಗಿ ಉಳಿದಿರುವ ಕಾರ್ಯಭಾರಕ್ಕೆ ಅನುಗುಣವಾಗಿ ಈಗಾಗಲೇ ಆಯಾ ವಿಭಾಗಗಳಿಗೆ ಅನುಗುಣವಾಗಿ ಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಮೆರಿಟ್-ಕಂ-ರೋಸ್ಟರ್ ಪ್ರಕಾರ ನೇಮಕಾತಿ ಮಾಡಿ ಪರಿಷ್ಕೃತ ಆದೇಶವನ್ನು ಹೊರಡಿಸುವ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಆಡಳಿತ ಸುಗಮತೆಯ ಹಿನ್ನೆಲೆಯಲ್ಲಿ ಈ ಬದಲಾವಣೆಗಳನ್ನು ಒಪ್ಪಿ ಅನುಮೋದನೆ ನೀಡಲಾಯಿತು. |
| 7 | ರಾಯಚೂರು ವಿಶ್ವವಿದ್ಯಾಲಯದಲ್ಲಿರುವ ವಿವಿಧ ಅಧ್ಯಯನ ವಿಭಾಗಗಳಿಗೆ ಸ್ಥಳೀಯ ಪ್ರಭಾರ ಮುಖ್ಯಸ್ಥರನ್ನು ನೇಮಕಾತಿ ಮಾಡುವ ಬಗ್ಗೆ ಚರ್ಚೆ | ರಾಯಚೂರು ವಿಶ್ವವಿದ್ಯಾಲಯದಲ್ಲಿರುವ ವಿವಿಧ ಅಧ್ಯಯನ ವಿಭಾಗಗಳಿಗೆ ವಿಶ್ವವಿದ್ಯಾಲಯದಲ್ಲಿರುವ ಖಾಯಂ ಪ್ರಾಧ್ಯಾಪಕರುಗಳನ್ನು ಸ್ಥಳೀಯ ಪ್ರಭಾರ ಮುಖ್ಯಸ್ಥರನ್ನಾಗಿ ನೇಮಕಾತಿ ಮಾಡುವ ಬಗ್ಗೆ ವಿಸ್ತೃತವಾಗಿ ಚರ್ಚಿಸಿ ಆಡಳಿತ ಸುಗಮತೆಯ ಹಿನ್ನೆಲೆಯಲ್ಲಿ ಈ ಕೆಳಕಾಣಿಸಿದಂತೆ ಪ್ರಾಧ್ಯಾಪಕರುಗಳನ್ನು<br>1. ಪ್ರೋ. ಪಾರ್ವತಿ ಸಿ.ಎಸ್. ಇವರನ್ನು ವಾಣಿಜ್ಯ, ಸಮಾಜಕಾರ್ಯ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಮತ್ತು ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗಗಳಿಗೆ |

| | | |
|---|---|---|
| | | 2. ಪ್ರೊ. ಪಿ. ಭಾಸ್ಕರ್ ಇವರನ್ನು<br>ಗಣಕ ವಿಜ್ಞಾನ, ಭೌತಶಾಸ್ತ್ರ ರಸಾಯನಶಾಸ್ತ್ರ ಸಸ್ಯಶಾಸ್ತ್ರ ಪ್ರಾಣಿಶಾಸ್ತ್ರ ಸೂಕ್ಷ್ಮಜೀವಶಾಸ್ತ್ರ ವಿಭಾಗಗಳಿಗೆ<br>3. ಪ್ರೊ. ನುಸ್ರತ್ ಫಾತಿಮಾ ಇವರನ್ನು<br>ಸಮಾಜಶಾಸ್ತ್ರ ಇತಿಹಾಸ, ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಕನ್ನಡ, ಇಂಗ್ಲೀಷ್, ಉರ್ದು ಮತ್ತು ಮಹಿಳಾ ಅಧ್ಯಯನ ವಿಭಾಗಳಿಗೆ<br>ಪ್ರಭಾರ ಮುಖ್ಯಸ್ಥರನ್ನಾಗಿ ನೇಮಕಾತಿ ಮಾಡಲು ಅನುಮೋದನೆ ನೀಡಲಾಯಿತು. |
| 08 | ರಾಯಚೂರು ವಿಶ್ವವಿದ್ಯಾಲಯದ ವಿವಿಧ ಸ್ನಾತಕ/ಸ್ನಾತಕೋತ್ತರ ಹಾಗೂ ಸಂಶೋಧನಾ ಪದವಿ/ಅಧ್ಯಯನ ವಿಭಾಗಗಳ ಪಠ್ಯಕ್ರಮವನ್ನು ರಚಿಸುವ ಸಲುವಾಗಿ ಸಂಬಂಧಿಸಿದ ವಿಭಾಗಗಳ ಅಧ್ಯಯನ ಮಂಡಳಿ (BOS) ಗಳನ್ನು ರಚಿಸುವ ಬಗ್ಗೆ | ವಿಭಾಗಗಳ ಅಧ್ಯಯನ ಮಂಡಳಿ (BOS) ಗಳನ್ನು ರಚಿಸುವ, ಸಂಬಂಧ ಚರ್ಚೆಯ ನಂತರ ಜೇಷ್ಠತಾ ಆಧಾರದ ಮೇಲೆ ಸ್ಥಳೀಯ ಪ್ರಾತಿನಿಧ್ಯತೆ ನೀಡುವ ಜೊತೆಗೆ ಅಧ್ಯಯನ ಮಂಡಳಿ (BOS) ರಚನೆಯನ್ನು ಮಾಡಲು ಒಪ್ಪಿಗೆ ಮತ್ತು ಅನುಮೋಧನೆ ನೀಡಲಾಯಿತು. |
| 09 | ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳ ಚರ್ಚೆಯ ಐಟಂನಲ್ಲಿ ಸಿಂಡಿಕೇಟ್ ಸದಸ್ಯರಾದ ಶ್ರೀ ಶಿವಬಸಪ್ಪ ಮಾಲಿಪಾಟೀಲ ಅವರು ಹೊಸ ಕಾಲೇಜು/ಕೋರ್ಸುಗೆ ಅನುಮೋದನೆ/ಮಂಜೂರಾತಿಗೆ ಠೇವಣಿ ಮೊತ್ತವನ್ನು ಇಡುವ ಬಗ್ಗೆ ಚರ್ಚಿಸಲು ಅನುಮತಿ ಕೋರಿದರು. | ಮಾನ್ಯ ಕುಲಪತಿಗಳ ಅಪ್ಪಣೆಗೆ ಮೇರೆಗೆ ಹೊಸದಾಗಿ ಕಾಲೇಜು/ಕೋರ್ಸುಗೆ ಅನುಮೋದನೆ/ ಮಂಜೂರಾತಿಗೆ ಠೇವಣಿ ಮೊತ್ತವನ್ನು ಇಡುವ ಬಗ್ಗೆ ಚರ್ಚಿಸಲು ಅನುಮತಿಸಿ ಈಗಾಗಲೇ ರಾಯಚೂರು ವಿಶ್ವವಿದ್ಯಾಲಯವು ನಿರ್ಧರಿಸುರುವಂತೆ ಹೊಸ ಕಾಲೇಜು/ಕೋರ್ಸುಗಳನ್ನು ಪ್ರಾರಂಭಿಸಲು ಠೇವಣಿ ಈ ಕೆಳಗಿನಂತಿದ್ದು<br>UG COURSE<br>1. BA - 4,50,000.00<br>2. B.Sc - 5,00,000.00<br>3. B.Com - 5,00,000.00<br>4. BCA - 5,00,000.00<br>5. BBA/BBM - 5,00,000.00<br>6. BSW - 6,00,000.00<br>7. B.Ed - 6,00,000.00<br>8. B.P.Ed - 6,00,000.00<br><br>PG COURSE<br>1. MA (Per Course) - 6,00,000.00<br>2. MSW - 6,00,000.00<br>3. M.COM - 6,00,000.00<br>4. MJMC - 6,00,000.00<br>5. M.SC (Per Course) - 8,00,000.00<br>6. PG Diploma (Per Course) - 5,00,000.00<br><br>ಇದರ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಸಿಂಡಿಕೇಟ್ ಸದಸ್ಯರುಗಳ ಒಮ್ಮತದ ಅಭಿಪ್ರಾಯದಂತೆ ಮೇಲಿರುವ ಠೇವಣಿ ಮೊತ್ತದಲ್ಲಿ ಶೇಕಡಾ 20% ಕಡಿತ ಗೊಳಿಸಿ ನೂತನ ಠೇವಣಿಯನ್ನು ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರು ಪಟ್ಟಿ ಮಾಡಿ ಕಾಲೇಜುಗಳಿಗೆ ಸುತ್ತೋಲೆಯ ಮುಖಾಂತರ ತಿಳಿಸಿ ಅದನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ (ವೆಬ್‌ಸೈಟ್)ನಲ್ಲಿ ಅಪಲೋಡ ಮಾಡಲು ತೀರ್ಮಾನಿಸಿ ನಿರ್ದೇಶಿಸಲಾಯಿತು. |

| | | |
|---|---|---|
| 10 | ಮಾನ್ಯ ಕುಲಸಚಿವರು (ಮೌಲ್ಯಮಾಪನ) ಇವರ 2021-22ನೇ ಸ್ನಾತಕೋತ್ತರ ಪ್ರಥಮ ಸೆಮಿಸ್ಟರ್‌ನ ಪರೀಕ್ಷಾ ಮೌಲ್ಯಮಾಪನವನ್ನು ಡಿಜಿಟಲ್ ಇವ್ಯಾಲುವೇಶನ್ (ಗಣಕೀಕೃತ ಮೌಲ್ಯಮಾಪನ) ಮಾಡಿಸುವ ಬಗ್ಗೆ ಚರ್ಚೆ | ಮಾನ್ಯ ಕುಲಪತಿಗಳ ಅಪ್ಪಣೆಗೆ ಮೇರೆಗೆ ಕುಲಸಚಿವರು (ಮೌಲ್ಯಮಾಪನ) ಇವರ 2021-22ನೇ ಸ್ನಾತಕೋತ್ತರ ಪ್ರಥಮ ಸೆಮಿಸ್ಟರ್‌ನ ಪರೀಕ್ಷಾ ಮೌಲ್ಯಮಾಪನವನ್ನು ಡಿಜಿಟಲ್ ಇವ್ಯಾಲುವೇಶನ್ (ಗಣಕೀಕೃತ ಮೌಲ್ಯಮಾಪನ) ಮಾಡಿಸುವ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಡಿಜಿಟಲ್ ಇವ್ಯಾಲುವೇಶನ್ ತಂತ್ರಾಂಶವನ್ನು ಅಳವಡಿಸಿಕೊಂಡು ಮೌಲ್ಯಮಾಪನ ಕಾರ್ಯಗಳನ್ನು ಮಾಡಿದಲ್ಲಿ ವಿಶ್ವವಿದ್ಯಾಲಯಕ್ಕೆ UUCMS ತಂತ್ರಾಂಶಕ್ಕೆ ಅನುಕೂಲವಾಗಿದ್ದು ಹಾಗೂ ಎಲ್ಲಾ ಫಲಿತಾಂಶಗಳನ್ನು ಡಿಜಿಟಲ್ ಸಾಫ್ಟ್ ಕಾಪಿ (Digital Soft Copy) ಮುಖಾಂತರ ಸಂಗ್ರಹಿಸಿ ನ್ಯಾಡ್ (NAD) ನಲ್ಲಿ ಪ್ರಕಟಿಸಲು ಅನುಕೂಲವಾಗಿದ್ದು ಹಾಗೂ ಸರ್ಕಾರದ ಆದೇಶದನ್ವಯ ಎಲ್ಲಾ ಪರೀಕ್ಷಾಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಡಿಜಿಟಲೀಕರಣ ಗೊಳಿಸಲು ಅನುಕೂಲವಾಗುವುದರಿಂದ ಡಿಜಿಟಲ್ ಇವ್ಯಾಲುವೇಶನ್ ಮಾಡಿಸಲು ಕೆಟಿಟಿಪಿ ಕಾಯ್ದೆಯ ಅನ್ವಯ ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ಕಾರ್ಯಗತಗೊಳಿಸಲು ಅನುಮೋದಿಸಲಾಯಿತು. |

24/9/22
(ಪ್ರೊ. ವಿಶ್ವನಾಥ ಎಂ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ,ರಾಯಚೂರು
**ಕುಲಸಚಿವರು**
**ರಾಯಚೂರು ವಿಶ್ವವಿದ್ಯಾಲಯ**
**ರಾಯಚೂರು.**

24.9.2022
(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ,ರಾಯಚೂರು
**ಕುಲಪತಿಗಳು**
**ರಾಯಚೂರು ವಿಶ್ವವಿದ್ಯಾಲಯ**
**ರಾಯಚೂರು**